**5**

# ಬೈಬಲಿನ ಮಹಾ ಬೋಧನೆಗಳು

ಬೈಬಲಿನಲ್ಲಿ ಬೋಧಿಸಿದ ಮಹಾ ತತ್ವಗಳು ಆ ತತ್ವಗಳಿಗಾಗಿ ಅತಿಮಾನುಷ ಮೂಲವನ್ನು ತೋರಿಸುತ್ತವೆ.

## ದೇವರ ಬಗ್ಗೆ ಬೋಧನೆ

ದೈವತ್ವದ ಬಗ್ಗೆ ಬೈಬಲಿನ ವಿವರಣೆಯು ಉದಾತ್ತವಾದ, ಘನತೆಗೇರಿಸಲ್ಪಟ್ಟ ಎಲ್ಲವನ್ನೂ ಗೌರವಿಸುತ್ತದೆ. ಬೈಬಲಿನ ದೇವರು ಸ್ಥಳಿಕ ಗೋತ್ರದ ಇಲ್ಲವೇ ಪಟ್ಟಣದ ದೇವರು ಆಗಿರದೇ ಪರಲೋಕ ಭೂಲೋಕಗಳ ಸೃಷ್ಟಿಕರ್ತನಾಗಿದ್ದಾನೆ. ಬೈಬಲಿನ ದೇವರು ಹಿತ್ತಾಳಿ, ಕಬ್ಬಿಣ, ಕಟ್ಟಿಗೆ ಇಲ್ಲವೇ ಕಲ್ಲು ಆಗಿರದೇ - "ನೋಡದಿರುವಾತನೂ, ಕೇಳದಿರುವಾತನೂ ಇಲ್ಲವೇ ತಿಳಿದುಕೊಳ್ಳದಿರುವಾತನೂ ಆಗಿರದೇ" (ದಾನಿಯೇಲ 5:23) - ಸರ್ವಜ್ಞಾನಿ ಆತ್ಮನಾಗಿದ್ದಾನೆ. ಅನ್ಯ ದೇವತೆಗಳ ನಡತೆಗೆ ಅನ್ವಯಿಸಿದಂತೆ ದೇವರು ಎಂದೂ ಮತ್ಸರ, ಪ್ರತೀಕಾರ, ಕಾಮುಕತೆ ಇಲ್ಲವೇ ಇತರ ಅನೈತಿಕತೆಗಳ ಮಟ್ಟಕ್ಕೆ ತನ್ನನ್ನು ಇಳಿಸಿಕೊಂಡಿರುವದಿಲ್ಲ. ಅದರ ಬದಲು ಬೈಬಲಿನ ದೇವರು ದುಷ್ಟತ್ವವಿಲ್ಲದವನು; "ಆತನು ನಡಿಸುವದೆಲ್ಲಾ ನ್ಯಾಯ; ಆತನು ನಿರ್ವಂಚಕನಾದ ನಂಬಿಗಸ್ತ ದೇವರು, ನೀತಿಯುಳ್ಳವನೂ ಯಥಾರ್ಥನೂ ಆಗಿದ್ದಾನೆ" (ಧರ್ಮೋಪದೇಶ ಕಾಂಡ 32:4). ದೇವರು ಪ್ರೇಮಾ ಸ್ವರೂಪಿ. ಆತನು ದಂಡಿಸಬೇಕಾಗಿರುವಾಗ, ಅದು ಯಾವಾಗಲೂ ಆತನಿಗೆ ದುಃಖದ ಮೂಲವಾಗಿರುವುದು. ಆತನು ಮಾನವ ಕ್ಷೇಮಕ್ಕಾಗಿ ಹೃದಯದಲ್ಲಿ ಚಿಂತೆಯುಳ್ಳವರಾಗಿ, ಎಲ್ಲಾ ಮಾನವ ಕುಲಕ್ಕೆ ದೊಡ್ಡವನಾದ ಹಾಗೂ ದಯೆಯುಳ್ಳ ತಂದೆಯಾಗಿದ್ದಾನೆ.

ಪ್ರತಿಯೊಂದು ಯುಗದಲ್ಲಿಯ ಎಲ್ಲಾ ರಾಷ್ಟ್ರಗಳಲ್ಲಿಯ ಜನರು ತಮ್ಮಷ್ಟಕ್ಕೆ ತಾವೇ ದೇವರುಗಳನ್ನು ಆರಾಧಿಸಿದ್ದಾರೆ. ಹೀಗಿದ್ದರೂ ಅವರ ದೇವತೆಗಳು ದೇವರಲ್ಲಿ ಒಳಗೊಂಡಿರುವ ಶ್ರೇಷ್ಠ ಗುಣಗಳಿಂದ ಎಂದೂ ಚಿತ್ರಿಸಲ್ಪಟ್ಟಿಲ್ಲ. ಮಾನವ ನಿರ್ಮಿತ ದೇವರುಗಳ ಮತ್ತು ಬೈಬಲಿನ ದೇವರ ಮಧ್ಯದಲ್ಲಿಯ ಭಿನ್ನತೆಯು ಅಂಥ ಶ್ರೇಷ್ಠ ದೇವರ ಭಾವನೆ ಮಾನವ ಮೂಲದ್ದಲ್ಲವೆಂದು ಬಲವಾಗಿ ಸೂಚಿಸಲ್ಪಟ್ಟಿದೆ. ಸ್ಪಷ್ಟವಾಗಿ, ಬೈಬಲ್ ಬರಹಗಾರರಿಗೆ ತಾವು ಮೂಲವಾಗಿ ಪ್ರಾರಂಭಿಸದ ದೇವರ ಭಾವನೆಯಿದ್ದರೆ, ಅವರಿಗೆ ಮಾನವಾತೀತ ಸಹಾಯವಿದ್ದಿರ ಬೇಕು.

## ಮಾನವನ ಬಗ್ಗೆ ಬೋಧನೆ

ದೇವರ ಬಗೆಗಿನ ಬೈಬಲಿನ ಉಪದೇಶವು ಉನ್ನತಕ್ಕೇರಿಸಲ್ಪಟ್ಟದ್ದನ್ನು ಮಾನ್ಯವಾದದ್ದನ್ನು ಗೌರವಿಸುವಂತೆಯೇ, ಮನುಷ್ಯನನ್ನು ಕುರಿತಾಗಿರುವ ಬೈಬಲಿನ ಬೋಧನೆಯು

ಅವನಲ್ಲಿ ಕೊರತೆಗಳಿದ್ದರೂ ಅವನನ್ನು ಗೌರವಿಸುತ್ತದೆ. ಮನುಷ್ಯನ ಸ್ವಭಾವದ ಬಗ್ಗೆ ಬೈಬಲಿನ ವಿವರಣೆಯು ಅತೀ ಶ್ರೇಷ್ಠವಾದದ್ದಾಗಿರುವದಲ್ಲದೇ ಬಹಳ ನಿಶ್ಚಿತವಾದದ್ದೂ ಆಗಿರುತ್ತದೆ.

**ದೇವರ ಸ್ವರೂಪದಲ್ಲಿ, ಆದಾಗ್ಯೂ ಪಾಪ ಮಾಡಿದವನು**

ಬೈಬಲಿನಲ್ಲಿ ಮನುಷ್ಯನು ಪ್ರಾಣಿಗಿಂಥ ಶ್ರೇಷ್ಠನಾಗಿ ಇಡಲ್ಪಟ್ಟಿದ್ದಾನೆ. ದೇವರ ಸ್ವರೂಪದೊಂದಿಗೆ ಅವನು ಗೌರವಿಸಲ್ಪಟ್ಟಿದ್ದಾನೆ; ಅವನು ದೇವದೂತರಿಗಿಂತ ಸ್ವಲ್ಪ ಕಡಿಮೆಯಾಗಿ ಇಡಲ್ಪಟ್ಟಿದ್ದಾನೆ. ಹೀಗಿದ್ದರೂ ಅದೇ ಬೈಬಲು ಮನುಷ್ಯನನ್ನು ದೇವರ ದೃಷ್ಟಿಯಲ್ಲಿ ಮಿಡಿತೆಯಂತೆ ಚಿಕ್ಕವನನ್ನಾಗಿಯೂ ಅತಿಯಾಗಿ ಪಾಪದಿಂದ ತುಂಬಿದವನನ್ನಾಗಿಯೂ ವಿವರಿಸುತ್ತದೆ. ಈ ದ್ವಂದ್ವ ದೃಷ್ಟಿಕೋನವು ಮನುಷ್ಯನು ತನ್ನ ಮಹತ್ವವನ್ನೂ ತಾನು ಹೊಲೆಯಾದದ್ದನ್ನೂ ತಿಳಿದುಕೊಳ್ಳುವಂತೆ ಮಾಡುತ್ತದೆ. ಮನುಷ್ಯನು ಕೀಳು ಮನೋಭಾವನೆಯವನಾಗಲೀ ಇಲ್ಲವೇ ಅಹಂಭಾವನೆಯುಳ್ಳವನಾಗಲೀ ಆಗಿ ಬೆಳೆಯುವದನ್ನು ಇದು ತಡೆಗಟ್ಟುತ್ತದೆ. ಮನುಷ್ಯನು ಪ್ರೀತಿಸಲ್ಪಡುತ್ತಾನೆ ಹಾಗೂ ಮೆಚ್ಚಿಕೊಳ್ಳಲ್ಪಡುತ್ತಾನೆ ಎಂಬುದನ್ನು ಬೈಬಲ್ ತೋರಿಸುತ್ತದೆ. ಅದೇ ಸಮಯದಲ್ಲಿ ಪವಿತ್ರತೆ ಮತ್ತು ಪರಿಶುದ್ಧತೆಯ ಕೊರತೆಯನ್ನೂ ಅದು ತೋರಿಸುತ್ತದೆ. ಮಾನವ ಮೂಲದ ಈ ಎರಡು ರೀತಿಯ ಸಂಗತಿಯು ಯೇಸುವಿನ ಮರಣದಲ್ಲಿ ಪ್ರತ್ಯೇಕವಾಗಿ ಸ್ಪಷ್ಟವಾಗಿದೆ: ಅಂದಾಜು ಮಾಡಲಾಗದ ಬೆಲೆಯುಳ್ಳ ಜೀವಿಗಳು ಮತ್ತು ಲೆಕ್ಕಿಸಲಾಗದ ಅಪರಾಧವು ಶಿಲುಬೆಗೆ ಹಾಕುವದನ್ನು ಕರೆಯುತ್ತದೆ.

**ಸ್ವತಂತ್ರ ನೈತಿಕ ಆಯ್ಕೆ**

ದೇವರು ಮನುಷ್ಯನನ್ನು ಸಂಪೂರ್ಣವಾಗಿ ಯಾಂತ್ರಿಕವಾದ ಹಾಗೂ ತೀರ್ಮಾನಿಸಲ್ಪಟ್ಟ ಯಂತ್ರಮಾನವನನ್ನಾಗಿ ಮಾಡಬಹುದಾಗಿದ್ದರೂ, ತಾನು ಮಾಡಿದ ಮನುಷ್ಯನಿಗೆ, ಸರಿಯಾದದ್ದನ್ನೂ ತಪ್ಪಾದ್ದನ್ನೂ ಹಾಗೂ ಸೈತಾನನ ಇಲ್ಲವೇ ದೇವರ ಸೇವೆ ಮಾಡುವದನ್ನು ಆಯ್ಕೆ ಮಾಡುವ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಡುವುದು ಆತನ ಆಯ್ಕೆ ಯಾಗಿತ್ತು. ನಿರ್ಧಾರವಾದಕ್ಕೂ ಅದೃಷ್ಟವಾದಕ್ಕೂ ವಿರುದ್ಧವಾಗಿ ಬೈಬಲು ಮನುಷ್ಯನನ್ನು ಅವನ ನಡತೆಗೆ ಜವಾಬ್ದಾರನನ್ನಾಗಿ ಮಾಡುತ್ತದೆ ಮತ್ತು ತನ್ನ ಸ್ವಂತ ನಿತ್ಯತ್ವದ ನಿರ್ದಿಷ್ಟ ಸ್ಥಾನವನ್ನು ನಿರ್ಧರಿಸಲು ಬಿಡುತ್ತದೆ.

**ಮಾನವ ಸರಿಸಮಾನತೆ**

ಬೈಬಲಿನ ಪ್ರಕಾರ ಮಾತನಾಡುವದಾದರೆ, ಜನಾಂಗಿಕ ಶ್ರೇಷ್ಠತೆಯು ಅಸ್ತಿತ್ವದಲ್ಲಿರಲಿಲ್ಲ. ಜನರ ಒಂದು ಗುಂಪಿಗಾಗಿ ಶ್ರೇಷ್ಠತೆಯನ್ನು ಹೇಳಿಕೊಳ್ಳುವುದು ಸಾಮಾನ್ಯವಾಗಿತ್ತು. ಯೆಹೂದ್ಯರು ಇತರ ಅನೇಕ ಜನಾಂಗಗಳೊಂದಿಗೆ ಜನಾಂಗಿಕ ಶ್ರೇಷ್ಠದೊಳಗೆ ಭ್ರಮೆಗೆ ಬಲಿಪಶುಗಳಾದರು. ಮೆಸ್ಸೀಯನನ್ನು ಲೋಕದೊಳಗೆ ತರುವದಕ್ಕಾಗಿ ದೇವರು ಯೆಹೂದೀ ಜನಾಂಗವನ್ನು ಆಯ್ಕೆ ಮಾಡಿಕೊಂಡನು. ಆದರೆ ಯೆಹೂದ್ಯರು ಇತರ ಜನಾಂಗಗಳಿಗಿಂತ ಶ್ರೇಷ್ಠರಾಗಿದ್ದಾರೆಂಬುದು ಆತನ ಅರ್ಥವಾಗಿರಲಿಲ್ಲ. ಆ ಸಂಬಂಧದಲ್ಲಿ ದೇವರು ಯಹೂದ್ಯರಿಗೆ ಅವರು ತಮ್ಮನ್ನು ಇತರರಿಗಿಂತ ಹೆಚ್ಚು ಉತ್ತಮರೆಂದು ತಿಳಿದು ಕೊಳ್ಳಬಾರದೆಂದು ವಿಶೇಷವಾಗಿ ಎಚ್ಚರಿಸಿದನು. ಹೀಗಿದ್ದರೂ ಅವರು ಸ್ವಾರ್ಥ - ಹೆಗ್ಗಳಿಕೆಯನ್ನು ಉಳಿಸಿಕೊಂಡಿದ್ದರು.

ಹಾಗೆಯೇ ಗ್ರೀಕರು ಇತರ ಜನಾಂಗವನ್ನು ಅನಾಗರಿಕರೆಂದು ಗಣನೆ ಮಾಡುತ್ತಿದ್ದರು. ಅದೇ ರೀತಿಯಲ್ಲಿ ರೋಮನ್‌ರು ಕಡಿಮೆ ತರಗತಿಯ ಜನಾಂಗಗಳನ್ನು ಬಗ್ಗುಬಡಿಯುವದರಿಂದ ತಮ್ಮ ಒಡೆತನವನ್ನು ಉಳಿಸಿಕೊಳ್ಳುವದನ್ನು ನಂಬಿದ್ದರು. ಅವರಿಗೆ ರೋಮನ್‌ರಲ್ಲದ ಎಲ್ಲರೂ ಕೇವಲ ಜಯಿಸಲ್ಪಡಬೇಕಾದ ವೈರಿಗಳಾಗಿದ್ದರು.

ಜನಾಂಗಿಕ ಹೋರಾಟವು ಮನುಷ್ಯನಿಂದ ತಪ್ಪಿಸಿ ಕೊಳ್ಳಲಾರದ್ದಾಗಿದೆಯೆಂದು ತಿಳಿಯಲ್ಪಟ್ಟಿತ್ತು. ಎರಡನೆಯ ಶತಮಾನದ ಕಪಟಿಯಾದ ಹಾಗೂ ಧರ್ಮನಿಂದಕನಾದ ಸೆಲ್ಸಸ್‌ನು ಕ್ರೈಸ್ತತ್ವವು ಎಲ್ಲಾ ಜನಾಂಗಗಳಿಗೆ ಒಂದೇ ಧರ್ಮವಾಗುವದನ್ನು ಮುನ್ನೋಡುತ್ತಿದ್ದುದರಿಂದ ಅದು ಯಶಸ್ವಿಯಾಗುವದಿಲ್ಲ ಎಂದು ವಾದಿಸಿದನು.

ಅಡೊಲ್ಫ ಹಿಟ್ಲರನು ಜರ್ಮನ್ನರು ಆರ್ಯದ ಕುಲದ ಪ್ರತಿನಿಧಿಗಳಾಗಿ ಒಂದು ಸಾವಿರ ವರ್ಷಗಳ ವರೆಗೆ ಜಗತ್ತನ್ನು ಆಳುವರು ಎಂದು ತನ್ನ ಹಿಂಬಾಲಕರಿಗೆ ಭರವಸೆ ಕೊಟ್ಟನು. ಅದೇ ರೀತಿಯಲ್ಲಿ ಜಪನೀಯರು 1940ರಲ್ಲಿ ಎಲ್ಲಾ ಮಾನವ ಕುಲಕ್ಕೆ ತಾವು ಉದಯವಾಗುತ್ತಿರುವ ಸೂರ್ಯನಾಗಿರುವೆವೆಂದು ನಂಬಿದ್ದರು.

ಹೀಗಿದ್ದರೂ, ಬೈಬಲು ದೇವರು ಪ್ರತಿಯೊಂದು ಜನಾಂಗವನ್ನು ಒಂದಾಗಿ ಮಾಡುವದನ್ನು ಚಿತ್ರೀಕರಿಸುತ್ತದೆ. ಎಲ್ಲಾ ಜನರಿಗೋಸ್ಕರವಾಗಿ ಯೇಸು ಮರಣಹೊಂದಿದನು ಎಂದು ಅದು ತೋರಿಸುತ್ತದೆ. "ದೇವರು ಪಕ್ಷಪಾತ ತೋರಿಸುವದಿಲ್ಲ" ಎಂಬ ಸತ್ಯವು (ಅಪೊಸ್ತಲರ ಕೃತ್ಯ 10:34) ಅದರ ಬಗ್ಗೆ ಸರಿಯಾದದ್ದನ್ನು ಗುರುತಿಸಿದೆ. ಜನರು ಸಾರ್ವತ್ರಿಕ ಸಹೋದರತ್ವವನ್ನು ರೂಢಿಸಿರುವದಿಲ್ಲ. ಜನರು ಬೌದ್ಧಿಕವಾಗಿ ಅದು ಖಂಡಿಸಲ್ಪಡಲಾರದು. ಯೆಹೂದ್ಯರು ಸ್ವಾಭಾವಿಕವಾಗಿ ಈ ತತ್ವವನ್ನು ಪ್ರಾರಂಭಿಸದಿದ್ದರೂ - ಇದು ಕೇವಲ ಮಾನವನದಾಗಿದ್ದರೆ - ಬೈಬಲು ಎಲ್ಲಿ ಈ ವಿಚಾರವನ್ನು ಹೊಂದಿಕೊಂಡಿತು ಎಂದು ಒಬ್ಬನು ಆಶ್ಚರ್ಯಪಡುವನು.

## ಕರ್ತವ್ಯದ ಬಗ್ಗೆ ಬೋಧನೆ

ಮಾನವ ಸ್ವಭಾವವನ್ನು ಕುರಿತು ಬೈಬಲ್ ಬೋಧನೆಯು ಯಾವುದೇ ಸಾಮಾನ್ಯವಾದ ಯೋಚನೆಯನ್ನು ಪ್ರತಿಬಿಂಬಿಸದಿರುವ ಹಾಗೆ, ಬೈಬಲ್ ಬೋಧನೆಯು ಮಾನವ ಜವಾಬ್ದಾರಿಕೆಯ ಬಗ್ಗೆ ಅತೀ ಉನ್ನತ ಮಟ್ಟದ ತತ್ವವನ್ನು ಪ್ರತಿಬಿಂಬಿಸುತ್ತದೆ. ಮನುಷ್ಯನ ಇಡೀ ಕರ್ತವ್ಯವು ಎರಡು ದೊಡ್ಡ ಆಜ್ಞೆಗಳಲ್ಲಿ ಸಂಕ್ಷೇಪಿಸಲ್ಪಟ್ಟಿದೆ: ದೇವರನ್ನು ಪ್ರೀತಿಸು ಹಾಗೂ ನೆರೆಯವನನ್ನು ಪ್ರೀತಿಸು. ಈ ಎರಡರ ಮೇಲೆ ಬೈಬಲಿನ ಎಲ್ಲಾ ಆಜ್ಞೆಗಳು ಅವಲಂಭಿಸಿವೆ (ಮತ್ತಾಯ 22:36-40).

### ದೇವರಿಗಾಗಿ ಪ್ರೀತಿ

ಬೈಬಲಿನ ಪ್ರಕಾರವಾಗಿ ಒಬ್ಬನ ಪ್ರಮುಖ ಪ್ರೀತಿಯು ಮತ್ತು ಅತ್ಯುನ್ನತ ನಿಷ್ಠೆಯು ಮನುಷ್ಯನ ಸೃಷ್ಟಿಕರ್ತನಲ್ಲಿ ಹಾಗೂ ಪರಲೋಕದ ತಂದೆಯಲ್ಲಿ ಕೇಂದ್ರೀಕರಿಸಲ್ಪಟ್ಟಿದೆ. ದೇವರಿಗಾಗಿರುವ ಪ್ರೀತಿಯು ಒಬ್ಬನ ಸ್ನೇಹಿತನ, ಒಬ್ಬನ ದೇಶದ ಹಾಗೂ ಒಬ್ಬನ ಕುಟುಂಬದ ಮೇಲೆ, ನಿಷ್ಠೆಯ ಮೇಲೆ ಅಗ್ರಸ್ಥಾನವನ್ನು ತೆಗೆದುಕೊಳ್ಳುವದನ್ನು ಸಮಯೋಚಿತವಾದದ್ದಕ್ಕಿಂತ ಹೆಚ್ಚಾಗಿ ದೇವರ ಮುಂದೆ ಯಾವುದು ಸರಿಯಾಗಿದೆಯೋ ಅದು ಒಬ್ಬನ ಕಾರ್ಯವನ್ನು ನಿರ್ಧರಿಸುತ್ತದೆ. ಅನೇಕರಿಂದ, ಬೈಬಲನ್ನು ನಂಬುವವರಿಂದಲೂ ಸಹ ಅನುಸರಿಸಲ್ಪಡದ ಧ್ಯಾನದ ಮಟ್ಟವನ್ನು ಇದು ಪ್ರತಿನಿಧೀಕರಿಸುತ್ತದೆ. ದೇವರು ಎರಡನೆಯ ಸ್ಥಾನವನ್ನು ತೆಗೆದು ಕೊಳ್ಳಲಾರನು.

ತನ್ನ ಪೂರ್ಣ ಹೃದಯದಿಂದ ದೇವರನ್ನು ಪ್ರೀತಿಸುವವನು ದುಷ್ಟ ಪ್ರಭುತ್ವಕ್ಕೂ ಸಹ ವಿಧೇಯನಾಗುವನು. ಅವನು ಹಿಂಸೆಯಲ್ಲಿ ಆನಂದಿಸುವನು. ಪ್ರತಿಯೊಂದು ಪರಿಸ್ಥಿತಿಯಲ್ಲಿ ಅವನು ತನ್ನನ್ನು ತೃಪ್ತನನ್ನಾಗಿಯೂ ಕೃತಜ್ಞತೆಯುಳ್ಳವನನ್ನಾಗಿಯೂ ಮಾಡಿಕೊಳ್ಳುವನು. ಸ್ವಾರ್ಥದ ಅಲ್ಲಗಳೆಯುವಿಕೆಗೆ ಅದನ್ನು ಒಪ್ಪಿಸಿ ಕೊಟ್ಟು ತನ್ನ ಯೋಚನೆಯನ್ನು ಶುದ್ಧವಾದದ್ದನ್ನಾಗಿಯೂ ಗುಣಶೀಲದ್ದನ್ನಾಗಿಯೂ ಇಟ್ಟುಕೊಳ್ಳುವನು.

**ನೆರೆಯವನಿಗಾಗಿ ಪ್ರೀತಿ**

ದೇವರ ಕಡೆಗೆ ಪ್ರೀತಿಯು ಬೆಳಿಸಲ್ಪಡುವುದು ಅಗತ್ಯವಾಗಿದ್ದರೂ ಆ ಪ್ರೀತಿಯು ತನ್ನ ನೆರೆಯವನನ್ನು ಪ್ರೀತಿಸದೇ ಇರುವವನಿಂದ ಅರ್ಪಿಸಲ್ಪಟ್ಟಿದ್ದರೆ ದೇವರು ಅದನ್ನು ತಿರಸ್ಕರಿಸುತ್ತಾನೆ. ಬೈಬಲಿನಲ್ಲಿ ಒಬ್ಬನ ನೆರೆಯವನಿಗಾಗಿರುವ ಪ್ರೀತಿಯು ತುಟಿಗಳ ಸೇವೆಗಿಂತಲೂ ಎಷ್ಟೋ ಹೆಚ್ಚಾದದ್ದನ್ನು ಪ್ರತಿನಿಧೀಕರಿಸುತ್ತದೆ. ಹಸಿದವರಿಗೆ ಊಟಕ್ಕೆ ಕೊಡುವಲ್ಲಿ, ದುರವಸ್ಥೆಯಲ್ಲಿರುವರಿಗೆ ಸಹಾಯ ಕೊಡುವದರಲ್ಲಿ ಹಾಗೂ ಭ್ರಷ್ಟರಾದವರ ಜೋಪಾಸನೆ ಮಾಡುವದರಲ್ಲಿ ಅದು ಕಾರ್ಯ ರೂಪಕ್ಕೆ ತರಲ್ಪಡುತ್ತದೆ. ಪ್ರತೀಕಾರಕ್ಕೆ ಅಪೇಕ್ಷಿಸದೇ ಒಬ್ಬನ ವೈರಿಗಳ ಕಡೆಗೆ ಪ್ರೀತಿತೋರಿಸುವದಕ್ಕಾಗಿ ಅದು ಕರೆಯುತ್ತದೆ. ಅದು ಕೆಡುಕನ್ನು ಒಳ್ಳೆಯದರಿಂದ ಜಯಿಸುತ್ತದೆ. ಒಬ್ಬನ ನೆರೆಯವನಿಗಾಗಿ ಪ್ರೀತಿಯು ದೀನತೆಯನ್ನು ಮತ್ತು ತನ್ನ ಸ್ವಂತದ ಅಗತ್ಯತೆಗಳ ಮೇಲೆ ಇತರರ ಅಗತ್ಯತೆಗಳನ್ನು ಇಡುವ ಯಥಾರ್ಥವಾದ ಅಪೇಕ್ಷೆಯನ್ನು ಕೇಳುತ್ತದೆ. ಒಬ್ಬನ ಜೊತೆಯವನ ಕಡೆಗೆ ಬೈಬಲಿನ ನೀತಿಯ ನಡತೆಯು ಬಹಳ ಶ್ರೇಷ್ಠವಾದದ್ದಾಗಿದ್ದು ಅದು ನಿಜವಾಗಿಯೂ ಬಹಳ ಸ್ವಲ್ಪ ಜನರಿಂದ ಅನುಸರಿಸಲ್ಪಡುತ್ತದೆ.

**ಸದುಪಯೋಗವಿಲ್ಲದ ಗುಣಗಳು ಹೊರಗಿಡಲ್ಪಟ್ಟಿವೆ**

ಮಾನವರಿಗಾಗಿ ಬೈಬಲ್ ಬೋಧನೆಯು ಪ್ರತ್ಯೇಕವಾಗಿ ಹೊಸ ಒಡಂಬಡಿಕೆಯಲ್ಲಿ ಅತ್ಯುತ್ತಮವಾದ ಎಲ್ಲವನ್ನೂ ಹೊರಗಿಡುತ್ತದೆ. ಅಷ್ಟೇ ಅಲ್ಲ ಗಮನೀಯವಾಗಿ ಅನ್ಯ ಧರ್ಮಗಳಲ್ಲಿ ಶಿಫಾರಸು ಮಾಡಲ್ಪಟ್ಟ ಲಕ್ಷಣಗಳನ್ನು ತೆಗೆದು ಹಾಕುತ್ತದೆ. ಇದು ದೈಹಿಕ ಶೌರ್ಯ, ದೇಶಭಕ್ತಿ ಮತ್ತು ಸ್ನೇಹವನ್ನು ಒಳಗೊಂಡಿರುವುದು. ದೈಹಿಕ ಶೌರ್ಯವನ್ನು ಕುರಿತು ಯೇಸುವು ಪೇತ್ರನಿಗೆ  ಅವನ ಕತ್ತಿಯನ್ನು ಒರೆಯಲ್ಲಿ ಹಾಕಬೇಕೆಂದು ಹೇಳಿ, ಕತ್ತಿಯನ್ನು ಹಿಡಿಯುವವರು ಕತ್ತಿಯಿಂದ ನಾಶವಾಗುವರು ಎಂದು ವಿವರಿಸಿದನು (ಮತ್ತಾಯ 26:52). ಶಕ್ತಿಯು ಸರಿಯಾದದ್ದನ್ನು ಮಾಡುವದಿಲ್ಲ. ಹಾಗೂ ಹಿಂದಿರುಗಿ ಹೋರಾಡುವದಕ್ಕಿಂತ ಶ್ರಮೆತಾಳುವುದು ಒಳ್ಳೆಯದನ್ನು ಮಾಡುತ್ತದೆ. ದೇಶಭಕ್ತಿಯ ವಿಷಯದಲ್ಲಿ ಒಬ್ಬನು ತನ್ನ ದೇಶವನ್ನು ಪ್ರೀತಿಸಬೇಕಾಗಿದ್ದರೂ ಪರಲೋಕದಲ್ಲಿ ನಾಗರಿಕತ್ವಕ್ಕಾಗಿ ಹೆಚ್ಚಿನ ರಾಜನಿಷ್ಠೆಯಿಂದಿರಬೇಕು. ಸ್ನೇಹಿತನ ಬಗ್ಗೆ, ಒಬ್ಬನು ತನ್ನ ಸ್ನೇಹಿತರಿಗಾಗಿ ಪ್ರಾಣಕೊಡಲು ಸಿದ್ಧನಾಗಿದ್ದರೂ ಸ್ನೇಹಿತರುಗಳು ದೇವರ ಸತ್ಯಕ್ಕೆ ನಿಲ್ಲದಿರುವಾಗ, ಸ್ನೇಹತ್ವದ ಮೇಲೆ ಸತ್ಯವು ಪ್ರಾಧಾನ್ಯತೆಯನ್ನು ತೆಗೆದು ಕೊಳ್ಳತಕ್ಕದ್ದು ಅವಶ್ಯವಾಗಿದೆ. ಅವಶ್ಯವಾಗಿದ್ದರೆ, ಸ್ನೇಹಿತರ ದೂರವಾಗುವಿಕೆಯು ಬಂದರೂ ಒಬ್ಬನು ದೇವರಿಗೂ ಹಾಗೂ ಆತನ ಸತ್ಯಕ್ಕೂ ಸಮರ್ಪಿಸಿಕೊಳ್ಳಬೇಕು "ಹೀಗೆ ಒಬ್ಬ ಮನುಷ್ಯನಿಗೆ ಅವನ ಮನೆಯವರೇ ವೈರಿಗಳಾಗುವರು" (ಮತ್ತಾಯ 10:36).

ಶೌರ್ಯ, ದೇಶಭಕ್ತಿ ಹಾಗೂ ಸ್ನೇಹತ್ವವೂ ಕೆಲವು ಕ್ಷೇತ್ರಗಳಲ್ಲಿ ಅಪೇಕ್ಷಿಸ ಬೇಕಾದ ಸದ್ಗುಣಗಳಾಗಿವೆ. ಹೀಗಿದ್ದರೂ ಅತ್ಯುನ್ನತ ನಡತೆಯು ನಿಯಮದಲ್ಲಿ ಈ ಗುಣಗಳು

ಮಿತಿಯುಳ್ಳವುಗಳಾಗಿವೆ. ಜನರು ಮಾನವ ಸದ್ಗುಣಗಳನ್ನು ಉನ್ನತಕ್ಕೇರಿಸಿದಾಗ, ದೇವರು ತನ್ನ ಸಿಂಹಾಸನದಿಂದ ತೆಗೆದು ಹಾಕಲ್ಪಡುತ್ತಾನೆ. ಈ ಮೂರು ಗುಣಲಕ್ಷಣಗಳು (ಇಲ್ಲವೇ ಯಾವುದೇ ಇತರವುಗಳು) ಸೃಷ್ಟಿಕರ್ತನಿಗೆ ಅತ್ಯುನ್ನತವಾದ ರಾಜ ನಿಷ್ಠೆಯೊಂದಿಗೆ ಘರ್ಷಣೆ ಹೊಂದುವಾಗ, ಅವು ಸದ್ಗುಣಗಳಾಗಿರುವುದು ನಿಂತು ಹೋಗಿ ದುರ್ಗುಣಗಳಾಗುವವು.

## ಮುಕ್ತಾಯ

ಸಹಾಯವಿಲ್ಲದ ಮಾನವ ಜೀವಿಗಳು ದೇವರನ್ನು, ಮಾನವ ಸ್ವಭಾವವನ್ನು ಮತ್ತು ಮಾನವ ಕರ್ತವ್ಯವನ್ನು ಕುರಿತು ಪರಿಶುದ್ಧ ಬರಹಗಳು ಅಂಥ ದೊಡ್ಡ ತತ್ವಗಳನ್ನು ಉತ್ಪಾದಿಸಿರುವದಿಲ್ಲ. ಸಹಾಯವಿಲ್ಲದ ಮಾನವ ಜೀವಿಗಳು ಆ ದೊಡ್ಡ ಬೋಧನೆಗಳನ್ನು ಹುಟ್ಟಿಸಿರಲಾರವು ಎಂಬುದಕ್ಕೆ ಸ್ಥಿರವಾದ ಪುರಾವೆಯಿರುವುದು. ಆದುದರಿಂದ, ಈ ಬೋಧನೆಗಳು ಬೈಬಲಿನ ದೈವಿಕ ಮೂಲದ ಆಂತರಿಕ ರುಜುವಾತಾಗಿವೆ.

ಬೈಬಲ್ ಬೋಧನೆಗಳ ಆಂತರಿಕ ದೃಷ್ಟಿ ಹಾಗೂ ಉನ್ನತ ಮಟ್ಟಕ್ಕೆ ಯೇಸುವಿನ ಪ್ರಸಂಗಗಳಿಗೆ ಆತನ ದಿನಗಳಲ್ಲಿಯ ಹಾಗೆಯೇ ಇಂದಿನ ಜನರ ಮೇಲೆಯೂ ಪರಿಣಾಮವುಳ್ಳವುಗಳಾಗಿವೆ. ನಜರೇತಿನಲ್ಲಿಯ ಆತನ ನೆರೆಯವರು ಆತನ ಜ್ಞಾನದ ಮಾತುಗಳಿಗೆ ಸಂಪೂರ್ಣವಾಗಿ ಆಶ್ಚರ್ಯಪಟ್ಟರು. ಆತನು ಅಷ್ಟು ಪ್ರತಿಭಾವಂತನೂ ಜ್ಞಾನಿಯೂ ಆಗಿರುವುದು ಹೇಗೆ ಎಂಬುದನ್ನು ಅವರು ತಿಳಿಯದವರಾಗಿದ್ದರು. ದಿಗ್ಭ್ರಾಂತಿಯಲ್ಲಿ ಅವರು ಹೀಗೆ ಹೇಳಿಕೊಂಡರು: “ಇವನಿಗೆ ಈ ಮಾತುಗಳು ಎಲ್ಲಿಂದ ಬಂದಿದ್ದವು? ಇವನು ಪಡೆದಿರುವ ಜ್ಞಾನವೇನು?” (ಮಾರ್ಕ 6:2). ಆತನು ತಮ್ಮ ಸ್ವಂತ ಪಟ್ಟಣದ ಯುವಕನೆಂದು ಅವರು ತಿಳಿದಿದ್ದರು; ಆತನ ತಂದೆ ತಾಯಿಗಳನ್ನು, ಆತನ ಸಹೋದರರನ್ನು ಹಾಗೂ ಆತನ ಸಹೋದರಿಯರನ್ನು ಅವರು ತಿಳಿದವರಾಗಿದ್ದರು. ವ್ಯಾವಹಾರಿಕವಾಗಿ ಅವರು ಆತನ ಇಡೀ ಜೀವನವನ್ನೇ ಬಲ್ಲವರಾಗಿದ್ದರು. ಆತನು ಶಾಲೆಗೆ ಹೋಗಿರಲಿಲ್ಲವೆಂಬುದನ್ನು ತಿಳಿದಿದ್ದರು. ಆತನು ಚೆನ್ನಾಗಿ ವಿದ್ಯಾಭ್ಯಾಸ ಮಾಡದವನಾಗಿದ್ದರೂ ಆತನು ತನ್ನ ಮೂವತ್ತು ವರ್ಷದ ಎರಡು ಪಟ್ಟು ಹೆಚ್ಚು ವಯಸ್ಸಾದವರ ತಿಳುವಳಿಕೆಗಿಂತ ಹೆಚ್ಚು ಜ್ಞಾನವನ್ನು ಪ್ರಕಟಿಸುತ್ತಿದ್ದನು. ಅವರ ಪ್ರಶ್ನೆಗೆ ಅವರಿಗೆ ಉತ್ತರವಿರಲಿಲ್ಲ.

ಹಾಗೆಯೇ, ಇಂದು ಯಾವುದೇ ವಿಶ್ವಾಸಿಗೆ ಅದೇ ಪ್ರಶ್ನೆಗೆ ಉತ್ತರವಿರುವದಿಲ್ಲ: “ಈ ಮನುಷ್ಯನು ಈ ಸಂಗತಿಯನ್ನು ಎಲ್ಲಿಂದ ಪಡೆದು ಕೊಂಡನು ಮತ್ತು ಈತನಿಗೆ ಕೊಡಲ್ಪಟ್ಟ ಈ ಜ್ಞಾನವು ಯಾವುದು?” ಯೇಸುವಿನ ಜನನಕ್ಕಿಂತ ಎಂಟು ಶತಮಾನಗಳ ಮೊದಲು ಕೊಡಲ್ಪಟ್ಟ ಮುಂತಿಳಿಸುವಿಕೆಯ ಮಾತನ್ನು ಸ್ವೀಕರಿಸುವವನು - ಇಷಯನ ವಂಶಜನಿಗೆ ಆತನ ಮೇಲೆ ಆತ್ಮನಿರುವನು, ಆತನು ತೀವ್ರವಾಗಿ ಅರ್ಥಮಾಡಿಕೊಳ್ಳುವಂತೆ ಮಾಡುವನು, ಆತನಿಗೆ ಆಲೋಚನೆಯನ್ನೂ ಜ್ಞಾನವನ್ನೂ ಕೊಡುವನು (ಯೆಶಾಯ 11:2) - ಯೇಸುವಿನ ಸರಿಗಟ್ಟಲಾಗದ ಮಾತುಗಳ ಮೂಲವನ್ನು ಅರ್ಥಮಾಡಿಕೊಳ್ಳಬಲ್ಲನು. ಇಲ್ಲದಿದ್ದರೆ, ಆತನ ಜ್ಞಾನದ ಕಾರಣವು ಎರಡು ಸಾವಿರ ವರ್ಷಗಳ ಹಿಂದೆ ಇದ್ದಂತೆಯೇ ಈಗಲೂ ಆಳವಾದ ರಹಸ್ಯವಾಗಿರುವುದು.

ಯೇಸುವಿನ ವೈಯಕ್ತಿಕ ಹೇಳಿಕೆಗಳು ಮಾನವಾತೀತ ಮೂಲಕ್ಕೆ ಸಾಕ್ಷಿಕೊಡುವವು. ಬೈಬಲಿನಲ್ಲೆಲ್ಲಾ ಇರುವ ಬೋಧನೆಗಳು ಮಾನವ ಕುಲಕ್ಕೆ ಅವುಗಳ ಲಾಭದಲ್ಲಿ ಅದ್ವಿತೀಯವಾಗಿರುವವು; ದೈವಿಕ ಮಟ್ಟಕ್ಕೆ ತೋರಿಸುವವು. “ಈ ಮನುಷ್ಯನು ತನ್ನ ಜ್ಞಾನವನ್ನು ಎಲ್ಲಿಂದ ಪಡೆದುಕೊಂಡನು?” ಎಂಬ

ಪ್ರಶ್ನೆಗೆ ಉತ್ತರವು ಬೈಬಲು ಮಾನವ ರೀತಿಯಿಂದ ಉತ್ಪಾದಿಸಲ್ಪಟ್ಟ ಗ್ರಂಥಕ್ಕಿಂತ ಹೆಚ್ಚಾಗಿಲ್ಲದಂತೆ ಗುರುತಿಸುವವರಿಗಾಗಿ ಮುಂದೆ ಬರುತ್ತಿರಲಿಲ್ಲ. ಹೀಗಿದ್ದರೂ ಬೈಬಲ್ ಬೋಧನೆಗಳ ಪ್ರಭಾವದಿಂದ ತನ್ನ ವಿವೇಚನೆಯನ್ನು ನಡಿಸಲು ಬಿಡುವವನಿಗೆ ಪ್ರಶ್ನೆಗೆ ಸುಲಭವಾದ ಉತ್ತರವಿರುವುದು: ಈ ಬೋಧನೆಗಳು ದೇವರಿಂದ ಬಂದವು.

© 2009 Truth for Today